ಕಷ್ಟಸಾದ್ಯವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಹಾಲು ಮಹಾಮಂಡಳದ ಆಡಳಿತ ಮಂಡಳಿ ಸಭೆಯಲ್ಲಿ ಈ ನಿವೇಶನವು ಕಾರ್ಖಾನೆ ಸ್ಥಾಪಿಸಲು ಸೂಕ್ತ ವಲ್ಲವೆಂದು ಕೈಬಿಡಲು ನಿರ್ಧರಿಸಲಾಗಿದೆ. ಹಾಸನ ಪಶು ಆಹಾರ ಘಟಕದಲ್ಲಿ 300 ಮೆ.ಟನ್ ಸಾಮರ್ಥ್ಯದ ನೂತನ ಪಶು ಆಹಾರ ಘಟಕವನ್ನು ಸ್ಥಾಪಿಸಿ ಪಶು ಆಹಾರ ಉತ್ಪಾದನಾ ಸಾಮರ್ಥ್ಯವನ್ನು ದಿನವಹಿ 200 ಮೆ.ಟನ್ ನಿಂದ 500 ಮೆ.ಟನ್‌ಗೆ ಹೆಚ್ಚಿಸಲಾಗಿರುತ್ತದೆ.

ಈ) ಈ ನಿವೇಶನವು ಕಾರ್ಖಾನೆ ಸ್ಥಾಪಿಸಲು ಸೂಕ್ತವಲ್ಲವೆಂದು ಕೈಬಿಡಲು ನಿರ್ಧರಿಸಲಾಗಿದೆ. ಪರ್ಯಾಯವಾಗಿ ಕರ್ನಾಟಕ ಸರ್ಕಾರವು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಕನ್ನಮಂಗಲ ಗ್ರಾಮದಲ್ಲಿ 20 ಎಕರೆ ಜಮೀನನ್ನು ಪಶು ಆಹಾರ ಘಟಕ ಸ್ಥಾಪನೆಗೆ ಆಗಸ್ಟ್ 2012 ರಲ್ಲಿ ಮಂಜೂರು ಮಾಡಿದ್ದು, ಸದರಿ ನಿವೇಶನದಲ್ಲಿ ಘಟಕ ಸ್ಥಾಪಿಸಲು ಕರ್ನಾಟಕ ಹಾಲು ಮಹಾಮಂಡಳಿಯು ನಿರ್ಧರಿಸಿರುತ್ತದೆ.

29 (48)

ಶ್ರೀ ಖಾದರ್ ಯು.ಟಿ.ಶಾಸಕರು (ಮಂಗಳೂರು ವಿಧಾನ ಸಭಾ ಕ್ಷೇತ್ರ)

05–12–2012

ಅ) ರಾಜ್ಯದಲ್ಲಿ ತೀವ್ರ ಬರಗಾಲದ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವು ದೊರೆಯದೆ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸಂದರ್ಭದಲ್ಲಿ ಪಶು ವೈದ್ಯಾಧಿಕಾರಿಗಳು ಮುಷ್ಕರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪಶು ವೈದ್ಯಾಧಿಕಾರಿಗಳ ಮುಷ್ಕರದಿಂದ ಸೂಕ್ತ ಚಿಕಿತ್ಸೆ ಮತ್ತು ಆರೈಕೆ ದೊರೆಯದೆ ಜಾನುವಾರುಗಳು ಸಾವು ನೋವಿಗೆ ಈಡಾಗಿರುವುದು ನಿಜವೇ; ಇದರಿಂದ ರೈತಾಪಿ ವರ್ಗ ಸಂಕಷ್ಟಕ್ಕೆ ಸಿಲುಕ್ಕಿದ್ದು, ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು)?

ಶ್ರೀ ರೇವೂ ನಾಯಕ್ (ಬೆಳಮಗಿ) (ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

ಅ) ಹೌದು. ಕೊರತೆ ಇದ್ದ ಮೇವನ್ನು ಸ್ಥಳೀಯವಾಗಿ ಹಾಗೂ ಹೊರ ರಾಜ್ಯವಾದ ಆಂಧ್ರ ಪ್ರದೇಶದಿಂದ ಪಡೆದುಕೊಂಡು ಪೂರೈಸಲಾಗಿದೆ.

ಆ) ಹೌದು.

ಇ) ಪಶುವೈದ್ಯಾಧಿಕಾರಿಗಳು ಷರತ್ತುಬದ್ಧ ರಾಜೀನಾಮೆ ನೀಡುವ ಮೂಲಕ ಮುಷ್ಕರ ನಡೆಸಿದ್ದು, ಪಶು ಚಿಕಿತ್ಸೆ ಮತ್ತು ಆರೈಕೆ ಹಾಗೂ ಸರ್ಕಾರದ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಮುಖರಾಗಿರುವುದಿಲ್ಲ. ಇದರಿಂದ ಮುಷ್ಕರದ ಕಾರಣ ಯಾವುದೇ ಜಾನುವಾರುಗಳು ಸಾವು ನೋವಿಗೆ ಈಡಾಗಿರುವ ಬಗ್ಗೆ ಮತ್ತು ಇದರಿಂದಾಗಿ ರೈತಾಪಿ ವರ್ಗ ಸಂಕಷ್ಟಕ್ಕೆ ಸಿಲುಕಿದ ಬಗ್ಗೆ ವರದಿಯಾಗಿರುವುದಿಲ್ಲ.

ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಹುದ್ದೆ

2 (09)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

ಅ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಹಾಗೂ ಕಿರು ಅಂಗನವಾಡಿ ಕೇಂದ್ರಗಳಿವೆ(ಸಂಪೂರ್ಣ ಮಾಹಿತಿ ನೀಡುವುದು);

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಮಂಜೂರಾಗಿವೆ (ವಿವರ ನೀಡುವುದು);

ಇ) ಈ ಅಂಗನವಾಡಿ ಕೇಂದ್ರಗಳಿಗೆ ಎಷ್ಟು ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಹುದ್ದೆ ಭರ್ತಿ ಮಾಡಲಾಗಿದೆ, ಎಷ್ಟು ಹುದ್ದೆಗಳು ಖಾಲಿ ಇವೆ (ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡದೇ ಹಾಗೂ ಅಂಗನವಾಡಿ ಕೇಂದ್ರಗಳನ್ನು